**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಭಟ್ಕಳ**

**ಸಿಸಿ ನಂಬರಃ 743/2024**

**ಸಿ.ಡಬ್ಲ್ಯೂಃ 08, ಪಿ.ಡಬ್ಲ್ಯೂಃ 06**

ಸಾಕ್ಷಿದಾರರ ಹೆಸರು : ಮಹಾಂತೇಶ್

ತಂದೆಯ ಹೆಸರು : ಶಿವಯ್ಯ ಹಿರೇಮಠ

ವಯಸ್ಸು : 33 ವರ್ಷ

ಉದ್ಯೋಗ : ಪೊಲೀಸ್ ಪೇದೆ , ಭಟ್ಕಳ ಶಹರ ಪೊಲೀಸ್ ಠಾಣೆ

ವಾಸ್ತವ್ಯ : ಪೊಲೀಸ್ ವಸತಿ ಗೃಹ , ಭಟ್ಕಳ

**ಸಾಕ್ಷಿಗೆ ಪ್ರಮಾಣವಚನ ಭೋದಿಸಲಾಯಿತು , ತಾಃ 24/03/2025**

**ಮುಖ್ಯ ವಿಚಾರಣೆ : ಸರಕಾರಿ ಸಹಾಯಕ ಅಭಿಯೋಜಕರಿಂದ,**

ನಾನು ಭಟ್ಕಳ ಶಹರ ಪೊಲೀಸ ಠಾಣೆಯಲ್ಲಿ ದಿನಾಂಕಃ 15.06.2020 ರಿಂದ ಇವತ್ತಿನವರೆಗೆ ಪೊಲೀಸ್ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ. 16.12.2023 ರಂದು ನಾನು, ಚಾಸಾ 1, 6 ಮತ್ತು 7 ರವರು ಗಸ್ತು ಕರ್ತವ್ಯದಲ್ಲಿರುವಾಗ ಚಾಸಾ 1 ರವರಿಗೆ ಆಜಾದನಗರ 1 ನೇ ಕ್ರಾಸ್‌ನಲ್ಲಿರುವ ಒಂದು ಮನೆಯಲ್ಲಿ ಅಕ್ರಮವಾಗಿ ದನವನ್ನು ಕಟ್ಟಿದ್ದಾರೆ ಎಂಬ ಮಾಹಿತಿಯ ಮೇರೆಗೆ ನಾವೆಲ್ಲರೂ ಎರಡು ಪಂಚರನ್ನು ಕರಡೆದುಕೊಂಡು ಅಲ್ಲಿಗೆ ಹೋಗುತ್ತೇವೆ. ಸದರಿ ಮನೆಯನ್ನು ಪರಿಶೀಲಿಸಿದಾಗ ಮೂರು ಆಕಳು ಮತ್ತು ಒಂದು ಹೋರಿಯನ್ನು ಕಟ್ಟಿ ಹಾಕಲಾಗಿತ್ತು. ಆಗ ಚಾಸಾ 1 ರವರು ನನಗೆ ಛಾಯ ಚಿತ್ರವನ್ನು ತೆಗೆಯಲು ಹೇಳಿದರು. ಆಗ ಸಮಯ ಬೆಳಿಗ್ಗೆ 11.00 ಗಂಟೆಯಾಗಿತ್ತು. ಸದರಿ ಜಾನುವಾರಗಳನ್ನು ಹಗ್ಗದಿಂದ ಕಟ್ಟಿ ಹಾಕಲಾಗಿತ್ತು. ಅದರ ಮೌಲ್ಯ ನನಗೆ ಗೊತ್ತಿರುವುದಿಲ್ಲ. ಛಾಯಾ ಚಿತ್ರಗಳನ್ನು ತೆಗೆದು ಪ್ರಿಂಟ್ ಹಾಕಿಸಿ ಚಾಸಾ 11 ರವರಿಗೆ ಕೊಟ್ಟು , ನಾನು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿಯನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿದ್ದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು 65 ಬಿ ಪ್ರಮಾಣ ಪತ್ರದ ಹೇಳಿಕೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು , ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುದ್ದೆ ಮಾಲು 1 ನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು : ಆರೋಪಿ ಪರ ಶ್ರೀ ಎ. ಆರ್ . ಎಸ್. ವಕೀಲರಿಂದ,**

3. ಸದರಿ ಪ್ರಕರಣದ ಮಾಹಿತಿ ಬಂದಾಗ ನಾನು ಹಳೆಯ ಬಸ್ ಸ್ಟಾಂಡ್ ಹತ್ತಿರ ಕರ್ತವ್ಯದಲ್ಲಿ ಇದ್ದೆ. ಹಳೆಯ ಬಸ್ ಸ್ಟಾಂಡ್ ದಿಂದ ಘಟನಾ ಸ್ಥಳವು ಮೂರು ಕಿಲೋಮೀಟರ್ ದೂರದಲ್ಲಿ ಇದೆ. ಹಳೆಯ ಬಸ್ ಸ್ಟಾಂಡ್ ದಿಂದ ಘಟನಾ ಸ್ಥಳವು 5–10 ಕಿಲೋಮೀಟರ್ ದೂರದಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪಂಚರನ್ನು ಚಾಸಾ 1 ರವರು ಕರೆಯಿಸಿದ್ದರು. ಪಂಚರನ್ನು

ಜಾಲಿ ಕ್ರಾಸ್ ನಿಂದ ಕರೆದುಕೊಂಡು ಬಂದಿದ್ದರು. ಪಂಚರು ಜಾಲಿ ಕ್ರಾಸ್ ನಲ್ಲಿ ಏನು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಪಂಚರಿಗೆ ನೋಟಿಸನ್ನು ನೀಡಿ ಕರೆದುಕೊಂಡು ಬಂದಿರುತ್ತೇವೆ. ಜಾಲಿ ಕ್ರಾಸ್ ನಿಂದ ಘಟನಾ ಸ್ಥಳವು ಒಂದೂವರೆ ಕಿಲೋಮೀಟರ್ ದೂರದಲ್ಲಿ ಇದೆ. ಘಟನಾ ಸ್ಥಳದ ಅಕ್ಕ-ಪಕ್ಕದಲ್ಲಿ ಮನೆಗಳು ಇದೆ. ಘಟನಾ ಸ್ಥಳದ ಅಕ್ಕ-ಪಕ್ಕದ ಜನರನುನ ಸಾಕ್ಷಿ ಅಥವಾ ಪಂಚಸಾಕ್ಷಿಗಳನ್ನಾಗಿ ಕರೆಸಿಲ್ಲ. ಗುನ್ಹಾ ಸ್ಥಳದಲ್ಲಿ ಕಂಪೌಂಡ್ ಹಾಗೂ ಗೇಟ್ ಇದೆ. ಗೇಟಿನ ಮೇಲೆ ಯಾವುದೇ ಹೆಸರಿನ ಬೋರ್ಡ್ ಇರಲಿಲ್ಲ. ಘಟನಾ ಸ್ಥಳದಲ್ಲಿರುವ ಮನೆಯು ಯಾರಿಗೆ ಸೇರಿದ್ದು ಎಂದು ಪರಿಶೀಲನೆ ಮಾಡಿದ್ದೇವೆ. ಮನೆಯ ಮೇಲೆ ಹೆಸರನ್ನು ಹಾಕಲಾಗಿತ್ತು ಆದರೆ ಏನು ಎಂದು ನನಗೆ ನೆನಪಿಲ್ಲ. ಮನೆಯ ಮುಂದೆ ಮತ್ತು ಹಿಂದೆ ಸ್ವಲ್ಪ ಜಾಗ ಖಾಲಿ ಜಾಗ ಆಗಿತ್ತು. ದಾಳಿಯ ಕಾಲಕ್ಕೆ ನಾನು ಹಾಜರಿದ್ದೆ. ಜಾನುವಾರಗಳ ವಯಸ್ಸು ಹಾಗೂ ಬಣ್ಣ ನನಗೆ ಗೊತ್ತಿಲ್ಲ. ಘಟನಾ ಸ್ಥಳದಲ್ಲಿ ಒಂದು ಶೆಡ್ ಇತ್ತು. ನಾಲ್ಕು ಬಳ್ಳಿಗಳಿಂದ ಜಾನುವಾರಗಳನ್ನು ಕಟ್ಟಿ ಹಾಕಲಾಗಿತ್ತು. ನ್ಯಾಯಾಲಯದ ಮುಂದೆ ಇರುವ ಮುದ್ದೆ ಮಾಲು ಸಾಮಾನ್ಯವಾಗಿ ಎಲ್ಲಾ ಅಂಗಡಿಗಳಲ್ಲು ಸಿಗುತ್ತದೆ ಎಂದರೆ ಸರಿ. ಫೊಟೋ ತೆಗೆಯಲು ನಮ್ಮ ಇಲಾಖೆಯಲ್ಲಿ ತರಬೇತಿಯನ್ನು ನೀಡಿದ್ದಾರೆ. ಘಟನಾ ಸ್ಥಳದಲ್ಲಿ ಚಾಸಾ 1 , ನಾನು , ಚಾಸಾ 6 , ಮತ್ತೊಬ್ಬ ಹಾಗೂ ಚಾಸಾ 9 ರವರು ಹಾಜರಿದ್ದರು. ಫೋಟೋದಲ್ಲಿ ಕೇವಲ ಒಬ್ಬರೇ ಪೊಲೀಸರು ಕಾಣುತ್ತಿದ್ದಾರೆ. ಫೋಟೋದಲ್ಲಿ ಪ್ರಿಂಟರ್ ಕಾಣುತ್ತಿಲ್ಲ. ಸ್ಥಳದಲ್ಲಿ ಪ್ರಿಂಟ್ ತೆಗೆಯುವಾಗ ಯಾವುದೇ ಸಲಕರಣೆಗಳು ನಮ್ಮ ಬಳಿ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲಿ ನಾವು ಪಂಚನಾಮೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ನಾನು ಸಹಿಯನ್ನು ಮಾಡಿಲ್ಲ. ಪಿರ್ಯಾದಿದಾರರು ನಮ್ಮ ಮೇಲಾಧಿಕಾರಿ ಆಗಿದ್ದಾರೆ. ಪ್ರತ್ಯೇಕ್ಷ ಸಾಕ್ಷಿದಾರರು ನಮ್ಮ ಇಲಾಖೆಯ ಸಿಬ್ಬಂದಿಗಳು ಆಗಿದ್ದಾರೆ. ಅಂಕೆ-ಸಂಖ್ಯೆಗಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾ ಸ್ಥಳದಲ್ಲಿ ನಾನು ಯಾವುದೇ ಫೋಟೋವನ್ನು ತೆಗೆದಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸರ್ಟಿಫೀಕೆಟ್ ನ್ನು ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ ಜಾನುವಾರಗಳನ್ನು ವಶಕ್ಕೆ ಪಡೆದಿಲ್ಲ ಆದರಿಂದ ನನಗೆ ಸದರಿ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

**( ನನ್ನ ಹೇಳಿಕೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು )**

**ಓ.ಹೇ.ಕೇ. ಸರಿ ಇದೆ .**

**ಪ್ರ.ದ.ನ್ಯಾ.ದಂ., ಭಟ್ಕಳ.**